ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

**ಖಂಡ 2 ರಿಂದ 8ವರೆಗೆ**

ಉಪಾಧ್ಯಕ್ಷರು:- 'ಖಂಡ 2 ರಿಂದ 8ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 8ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

**ಖಂಡ 1 ಇತ್ಯಾದಿ:-**

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಈ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ):- ವಿಧಾನಪರಿಷತ್ತಿನಿಂದ ತಿರಸ್ಕೃತವಾಗಿರುವ 1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ ವಿಧಾನಪರಿಷತ್ತಿನಿಂದ ತಿರಸ್ಕೃತವಾಗಿರುವ 1993ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಪುನರ್ ಅಂಗೀಕರಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅಧ್ಯಕ್ಷರೇ....

ಉಪಾಧ್ಯಕ್ಷರು:- ನಾನು ಈಗ ಬಿಸಿನೆಸ್ ಪ್ರಕಾರ ಹೋಗುತ್ತೇನೆ. ಈಗ ಗಮನ ಸೆಳೆಯುವ ಸೂಚನೆಯನ್ನು ಮುಗಿಸಿಬಿಡೋಣ.

ಗಮನ ಸೆಳೆಯುವ ಸೂಚನೆ

ವಿಷಯ:- ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಮಂಡಳಿ, ನಿಗಮ ಮತ್ತಿತರ ಸರ್ಕಾರದ ಸಂಸ್ಥೆಗಳಲ್ಲಿ ನೇಮಕಾತಿ ಮತ್ತು ಮುಂಬಡ್ತಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಮಾನ್ಯ ಉಪಾಧ್ಯಕ್ಷರೇ, ಸರ್ಕಾರಿ ಕಛೇರಿಗಳಲ್ಲಿ, ಹಾಗೂ ಮಂಡಳಿ ನಿಗಮ ಮತ್ತಿತರ ಸರ್ಕಾರದ ಸಂಸ್ಥೆಗಳಲ್ಲಿ, ನೇಮಕಾತಿ ಹಾಗೂ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಮೀಸಲಾತಿಯ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ, ಈ ಹೇಳಿಕೆಯನ್ನು ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

ಸರ್ಕಾರವು ರಾಜ್ಯ ಸರ್ಕಾರಿ ಇಲಾಖೆಗಳು, ಘಟಕ ಕಛೇರಿಗಳು, ಮಂಡಲಿ ಮತ್ತು ನಿಗಮಗಳಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಯ ಬಗ್ಗೆ ಕಾಲ ಕಾಲಕ್ಕೆ ಆದೇಶಗಳನ್ನು ಹೊರಡಿಸುತ್ತ ಬಂದಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವ್ಯಾಪ್ತಿಯಲ್ಲಿರುವ ಉದ್ಯೋಗ ಕೋಶವು ಈಗಾಗಲೇ ಹೊರಡಿಸಿದ ಮೀಸಲಾತಿ ಸರ್ಕಾರಿ ಆದೇಶಗಳ ಅನುಷ್ಠಾನದ ಬಗ್ಗೆ ತಪಾಸಣೆ ಮಾಡುತ್ತಲಿದೆ.

ಇದುವರೆಗೆ ನಡೆಸಲಾಗಿರುವ ತಪಾಸಣೆಗಳಿಂದ ತಿಳಿದು ಬರುವುದೇನೆಂದರೆ ರಾಜ್ಯ ಸರ್ಕಾರದ ಇಲಾಖೆಗಳು, ಘಟಕ ಕಛೇರಿಗಳು, ಮಂಡಲಿ ಮತ್ತು ನಿಗಮಗಳು ನೇರ ನೇಮಕಾತಿ ಮತ್ತು ಮುಂಬಡ್ತಿಗಳಲ್ಲಿ ಮೀಸಲಾತಿ ಆದೇಶಗಳನ್ನು ಜಾರಿಗೆ ತಂದಿರುತ್ತವೆ. ಹಾಗೆ ಜಾರಿಗೆ ತರುವಾಗ ಕೆಲವೊಂದು ನ್ಯೂನತೆಗಳು, ಕೊರತೆಗಳೂ ಬೆಳಕಿಗೆ ಬಂದಿವೆ. ಅಂತಹ ಪ್ರಕರಣಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡಿ ಸರಿಪಡಿಸಿಕೊಳ್ಳಲು ತಿಳಿಸಲಾಗುತ್ತಿದೆ. ಆದರೆ ಸರ್ಕಾರದ ಯಾವುದೇ ಮೀಸಲಾತಿ ಆದೇಶವನ್ನು ಜಾರಿ ಮಾಡದೇ ಇರುವ ಪ್ರಕರಣಗಳು ಗಮನಕ್ಕೆ ಬಂದಿಲ್ಲ. ಅಂತಹ ಪ್ರಕರಣಗಳೇನಾದರೂ ಗಮನಕ್ಕೆ ಬಂದರೆ ಈಗಲೂ ನಿಯಮಾನುಸಾರ ಕ್ರಮ ತೆಗೆದುಕೊಳ್ಳಬಹುದಾಗಿದೆ.

† ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಓದಿದ ಈ ಸ್ಟೇಟ್‌ಮೆಂಟ್, ಇದು ಅಧಿಕಾರಿಗಳು ಬಹಳ ಸುಲಭವಾಗಿ ತಳ್ಳಿ ಹಾಕುವುದಕ್ಕೆ ಬರೆದಿದ್ದಾರೆ. ಇದರಲ್ಲಿ ಸತ್ಯಾಂಶ ಬಹಳ ಕಡಿಮೆ ಇದೆ. ಈ ಮೀಸಲಾತಿ ನಿಯಮಗಳು, ಇವತ್ತಿನದಲ್ಲ. ರಾಜ್ಯಾಂಗ ರಚನೆಯಾದಾಗಲೇ, ರಾಜ್ಯಾಂಗದಲ್ಲೆ ಆರ್ಟಿಕಲ್ 16(4)ನ್ನು ಅಳವಡಿಸಿದ್ದಾರೆ. ಆದರಿಂದ ಮೀಸಲಾತಿ, ನಮ್ಮ ರಾಜ್ಯದಲ್ಲೇ ಅಲ್ಲ, ಇಡೀ ಭಾರತ ದೇಶದಲ್ಲಿ ನಡೆಯುತ್ತಾ ಇದೆ. ನಾವೂ ಕೂಡ ಮೀಸಲಾತಿಯಿಂದ ಈ ಸಭೆಗೆ ಬಂದಂಥವರೇ. ಇಲ್ಲಿ 33 ಜನ ಆಸೆಂಬ್ಲಿ ಸದಸ್ಯರುಗಳು ಮೀಸಲಾತಿಯಲ್ಲಿ ಬಂದಿದ್ದೇವೆ. ಆದರೆ, ಈ ಮೀಸಲಾತಿ ಬಗ್ಗೆ ಯಾವ ಮಂತ್ರಿಮಂಡಲ ಬಂದರೂ ಸಹ, ಅಪಾರವಾದಂಥ ಆಸಕ್ತಿ ವಹಿಸಿದೆ. ಮತ್ತು ಅನೇಕ ಆದೇಶಗಳನ್ನು ಹೊರಡಿಸಿದ್ದಾರೆ. ಆದರೆ, ಸರ್ಕಾರದ ಅಧಿಕಾರಿಗಳು ಕಾರ್ಯಗತ ಮಾಡುವುದಕ್ಕೆ ವಿಫಲರಾಗಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮುಖ್ಯಮಂತ್ರಿಗಳು ಹೇಳಿದಂಥ ಸ್ಟೇಟ್‌ಮೆಂಟ್‌ನಲ್ಲಿ, ''ನ್ಯೂನತೆಗಳು, ಕೊರತೆಗಳು ಬೆಳಕಿಗೆ ಬಂದಿದೆ, ಅಂತಹ ಪ್ರಕರಣಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡಿ ಸರಿಪಡಿಸಿಕೊಳ್ಳಲಾಗುತ್ತಿದೆ ಮುಂಬಡ್ತಿಗಳಲ್ಲಿ ಮೀಸಲಾತಿ ಆದೇಶಗಳನ್ನು ಜಾರಿಗೆ ತಂದಿರುತ್ತೇವೆ'' ಎಂದು ಹೇಳಿರುತ್ತಾರೆ. ಜಾರಿ ಮಾಡದೇ ಇರುವ ಪ್ರಕರಣಗಳು ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಆದರೆ, ನಮ್ಮಂಥವರು ಎಷ್ಟೋ ಜನ ಕಾಗದಗಳನ್ನು ಬರೆದಿದ್ದೇವೆ. ಈ ರೀತಿ ಕಾಗದಗಳನ್ನು ಬರೆದರೂ ಕೂಡ ಜಾರಿ ಮಾಡದೇ ಇರುವ ಪ್ರಕರಣಗಳು ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಇದು ಬಹಳ ದುರಾದೃಷ್ಟ. ಅನೇಕ ಇಲಾಖೆಗಳಲ್ಲಿ ನಾವು ಹೋಗಿ ನೋಡಿದ್ದೇವೆ. ಮೀಸಲಾತಿಯನ್ನು ಅವರು ಅನೇಕ ನೆಪ ಮಾಡಿ ತಳ್ಳಿಹಾಕಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನಾವು, ನಮ್ಮ ಬೋರ್ಡ್, ಕಾರ್ಪೊರೇಷನ್‌ಗಳಲ್ಲಿ ಮೀಸಲಾತಿ ಕೊಡಬೇಕೆಂದು ಸರ್ಕಾರ ಆದೇಶವನ್ನು ಹೊರಡಿಸಿದ್ದೇವೆ. ಆದರಲ್ಲಿ ಸರ್ಕಾರಿ ಕಾರ್ಯದರ್ಶಿಯವರೂ ಒಬ್ಬರು ಮೆಂಬರು. ಆಲ್ಲಿ, ಕಮಿಟಿಯಲ್ಲಿ ಮುಂಬಡ್ತಿ ಕೊಡತಕ್ಕ ವಿಚಾರದಲ್ಲಿ 5 ಜನ ಎಸ್.ಸಿ.ಯವರು ಮೇಲಿದ್ದಾರೆ. 4 ಜನ ಬೇರೆಯವರು ಏನಿದ್ದಾರೆ, ಅವರು ಮೀಸಲಾತಿ ಮುಖಾಂತರ ಬಡ್ತಿ ಪಡೆಯಬೇಕೆಂದು ಇಲ್ಲ. ಆದರೆ, ಈ 5 ಜನ

ಷೆಡ್ಯೂಲ್ಡ್ ಕ್ಯಾಸ್ಟ್ ನವರು ಮೇಲಿದ್ದರೂ ಕೂಡ, 4 ಜನ ನಾನ್ ಷೆಡ್ಯೂಲ್ಡ್ ಕ್ಯಾಸ್ಟ್ ಪೀಪಲ್ಸ್‌ಗೆ, ಇವರ ಸರ್ವೀಸ್ ರೆಕಾರ್ಡ್ಸ್ ಚೆನ್ನಾಗಿಲ್ಲದಿದ್ದರೂ ಕೂಡ, ಪೆಂಡಿಂಗ್ ಎನ್‌ಕ್ವೈರಿ ಎಂದು ಹೇಳಿ, ಪ್ರಮೋಷನ್ ಕೊಟ್ಟರು. ಈ 5 ಜನ ಎಸ್.ಸಿ.ಯವರಿಗೆ ಪ್ರಮೋಷನ್ ಹೆಲ್ಡ್ ಅಪ್ ಮಾಡಿದರು. ಅದರಲ್ಲಿ ಬೇರೆ ಎಲ್ಲಾ ಒಪ್ಪಿದರೂ ಈ ಕಾರ್ಯದರ್ಶಿಯವರೇ ತಮ್ಮ ಟಿಪ್ಪಣಿಯಲ್ಲಿ ಅವರು ಕಾಂಪಿಟೆಂಟ್ ಅಲ್ಲ ಎಂದು ಬರೆದಿರುತ್ತಾರೆ. ಕಾಂಪಿಟೆಂಟ್ ಅಲ್ಲ ಎಂದರೆ ಹೇಗೆ? ಕಾರ್ಯದರ್ಶಿ ಏನು ಎಂಜಿನಿಯರೇ, ಮಿಲ್ಕ್ ಡೈರಿ ಎಕ್ಸ್‌ಪರ್ಟೇ, ಕಾಂಪಿಟೆಂಟ್ ಅಲ್ಲ, ಬಹುತೇಕ ಇಲಾಖೆಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ನವರಿಗೆ ಪ್ರಮೋಷನ್ ಕೊಡುವಾಗ ಕಾಂಪಿಟೆಂಟ್ ಅಲ್ಲ ಎಂದು ಒಂದು ಪದ ಸೇರಿಸುತ್ತಾರೆ, ಅಥವಾ ಸೂಟಬಲ್ ಅಲ್ಲ ಎಂದು ಒಂದು ಪದ ಸೇರಿಸುತ್ತಾರೆ, ಸೂಟಬಲ್ ಅಲ್ಲ ಎಂದರೆ ಏನು, ಅವರಿಗೆ ಸೂಟ್ ಆಗುವುದಿಲ್ಲವೇ?

ಉಪಾಧ್ಯಕ್ಷರು:- ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಕ್ಲಾರಿಫಿಕೇಷನ್ ಕೇಳಿ ಹೋಗುವುದಕ್ಕಲ್ಲ ನಾನು ಬಂದಿರುವುದು, ಇದು ಬಹಳ ಮುಖ್ಯವಾದ ವಿಷಯ, ಈ ವಿಷಯಕ್ಕೆ ತಾವು ಗಮನ ಕೊಡುವುದೇ ಇಲ್ಲ, ನಾಲ್ಕು ದಿವಸದಿಂದ ಇಲ್ಲಿ ಕಾದಿದ್ದೇವೆ.

ಉಪಾಧ್ಯಕ್ಷರು:- ಕಾಲ್ ಅಟೆನ್‌ಷನ್‌ಗೆ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಹೆಡ್‌ಮಾಸ್ಟರ್‌ಗಳನ್ನು 84ರಲ್ಲಿ ಅವರಿಗೆ ಬಡ್ತಿ ಕೊಡಬೇಕೆಂದು ತೆಗೆದುಕೊಂಡರು. ಸುಮಾರು 657 ಜನರಲ್ಲಿ ಇದರ ಪ್ರಕಾರ 87 ಜನಕ್ಕೆ ಕೊಡಬೇಕಾಗಿತ್ತು, ಆದರೆ 52 ಜನಕ್ಕೆ ಕೊಟ್ಟರು, 35 ಜನಕ್ಕೆ ಕೊಡಲೇ ಇಲ್ಲ, ಸರಕಾರದವರು ಕೊಟ್ಟಿರುವ ಅಂಕಿಅಂಶದ ಮೇಲೆ ಹೇಳುತ್ತಿದ್ದೇನೆ, ಆಮೇಲೆ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಹೈಪವರ್ ಕಮಿಟಿ ಎಂದು ಹೇಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೀಸಲಾತಿ, ಡೈರೆಕ್ಟ್ ರೆಕ್ರೂಟ್‌ಮೆಂಟ್‌ನಲ್ಲಿ ಮತ್ತು ಮುಂಬಡ್ತಿಯಲ್ಲಿ ಇದನ್ನು ಕುರಿತು ಚರ್ಚೆ ಮಾಡಿ ಯಾವ ಯಾವ ಇಲಾಖೆಯಲ್ಲಿ ಸರಿಪಡಿಸಬೇಕೆನ್ನುವ ವಿಚಾರದಲ್ಲಿ ಇದೆ. ನಮ್ಮ ಮುಖ್ಯಮಂತ್ರಿಗಳು ಈಗ ಬಂದಿದ್ದಾರೆ, ಅವರು ಆದಷ್ಟು ಬೇಗ ಹೈಪವರ್ ಕಮಿಟಿ ಮಾಡಿ, ಇಲಾಖೆಗಳವರನ್ನು ಕರೆದು ಎಲ್ಲಿ ಲೋಪದೋಷ ಇದೆ ಎಂಬುದನ್ನು ಹುಡುಕಬೇಕಾಗಿದೆ.

ಉಪಾಧ್ಯಕ್ಷರು:- ಈಗ ಮೋಟಮ್ಮನವರು ಮಾತನಾಡುತ್ತಾರೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಸ್ವಲ್ಪ ತಾಳಿ ನನ್ನದು ಆಗಿಲ್ಲ, ನಿಧಾನ ಮಾಡಿ.

ಉಪಾಧ್ಯಕ್ಷರು:- ಮಾನ್ಯ ಲಕ್ಷ್ಮಣಯ್ಯನವರೇ ಎಲ್ಲಾ ವಿಚಾರಗಳನ್ನೂ ಇಲ್ಲಿ ತರುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ನೀವು ಬರುವುದಿಲ್ಲ ಎಂದರೆ ನನಗೆ ಬರಬೇಕಾಗಿದೆ.

ಉಪಾಧ್ಯಕ್ಷರು:- ಇಲ್ಲ ಇಲ್ಲ ತಾವು ಬೇರೆ ರೂಪದಲ್ಲಿ ಬೇಕಾದರೆ ಕೇಳಬಹುದು ಕಾಲ್ ಅಟೆನ್‌ಷನ್ ಅಂದರೆ ಡಿಸ್ಕಷನ್‌ಗೆ ಸ್ಕೋಪ್ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಈಗ ಏನು ಹೇಳುತ್ತಿದ್ದಾರೆ ನಿಮಗೆ, ರೆಕಾರ್ಡ್ ಮೇಲೆ ಏನು ಹೋಯಿತು, ತಾವು ಏನು ಹೇಳಿದಿರಿ ಅವರಿಗೆ, ಆದಕ್ಕೆ ಅವರು ಏನು ಹೇಳಿದರು ಗೊತ್ತೇನು. ಸಭಾಧ್ಯಕ್ಷರಿಗೆ ಈ ಪ್ರಕಾರ ಹೇಳಿದರೆ ಸರಿಯೇ, ರೆಕಾರ್ಡ್ಸ್ ತೆಗೆಸಿ ನೋಡಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಸರ್ಕಾರಿ ಆದೇಶಗಳು ಕಾಲಕಾಲಕ್ಕೆ ಹೊರಟಿದೆ, ಆದನ್ನು ಕಾರ್ಯಗತ ಮಾಡುವುದರಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ, ಆಡಳಿತ ಮತ್ತು ಸಿಬ್ಬಂದಿ

ಇಲಾಖೆಯವರು ಈ ಉದ್ಯೋಗ ಕೋಶ ಎಂದು ಮಾಡಿದ್ದಾರೆ, ಆದರೆ ಅವರು ಯಾವ ಕೇಸ್ ಡಿಟೆಕ್ಟ್ ಮಾಡಲಿಲ್ಲ ಎಂದು ಕಾಣುತ್ತದೆ, ಇದುವರೆಗೆ ಯಾರ ಮೇಲೂ ಆಕ್ಷನ್ ತೆಗೆದುಕೊಂಡಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಇದೇನು ಭಾಷಣವೇ?....

ಉಪಾಧ್ಯಕ್ಷರು:- ಅದನ್ನು ಅವರನ್ನೇ ಕೇಳಬೇಕು ತಾವು.....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಇದೇನು ಭಾಷಣವೇ ಪ್ರಶ್ನೆಯೇ ಏನು ಎಂದು ನನಗೆ ಗೊತ್ತಾಗಲಿಲ್ಲ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಏನು ಗೊತ್ತಾಗಬೇಕು ಸ್ವಾಮಿ, ತಮಗೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಇದು ಭಾಷಣವೋ, ಪ್ರಶ್ನೆಯೋ?

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಇದು ಗಮನ ಸೆಳೆಯುವ ಸೂಚನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅಧ್ಯಕ್ಷರಿಗೇ ಹೇಳುತ್ತೀರಿ ನೀವು ಹಾಗೇ ಹೀಗೆ ಎಂದು ಏನದು?

ಶ್ರೀಮತಿ ಮೋಟಮ್ಮ:- ಅವರು ಏನು ಪ್ರಯತ್ನ ಮಾಡುತ್ತಿದ್ದಾರೆ ಎಂದರೆ ದಯವಿಟ್ಟು ಸ್ವಲ್ಪ ಕೇಳಬೇಕು.

ಶ್ರೀ ಟಿ.ಎಂ. ಮಂಜುನಾಥ್:- ನಿಮ್ಮ ನಾಯಕರೇ ಹೇಳಿದ್ದಾರೆ ಅವರಿಗೆ ಕೇಳಿರಿ ಎಂದು, ನೀವು ಏತಕ್ಕೆ ಅವರಿಗೆ ಅಬ್ಜೆಕ್ಷನ್ ಮಾಡುತ್ತೀರಿ.

SRI B.H. LAKSHMANAIAH:- The Government Order reads like this. If any appointing authority makes an appointment, or any authority making admission to a course of study in the University or any Educational Institution in controversion of the provisions of the Act or Rules made there under shall be punishable with a fine that may extend up to Rs.1000/- and imprisonment not exceeding six months.

ಇವತ್ತು ಕರ್ನಾಟಕ ರಾಜ್ಯದಲ್ಲಿ ಫೈನ್ ಹಾಕುವುದು ಆಗಲಿ ಅಥವಾ ಇಂಪ್ರಿಸನ್‌ಮೆಂಟ್ ಯಾವುದು ನಡೆದಿಲ್ಲ. ಆದ್ದರಿಂದ ಅಧಿಕಾರಿಗಳು....

ಶ್ರೀ ಎಸ್.ಎಸ್. ಜೋಷಿ:- ಸದನದಲ್ಲಿ ಇದುವರೆಗೂ ಏನು ಹೇಳಿದರು ಅದು ನಮಗೆ ಅರ್ಥವಾಗಲಿಲ್ಲ. ತಮಗೆ ಏನಾದರೂ ತಿಳಿದಿದ್ದರೆ ದಯವಿಟ್ಟು ತಿಳಿಸಿ...

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮುಖ್ಯಮಂತ್ರಿಗಳಿಗೆ ತಿಳಿದಿದ್ದರೆ ಸಾಕು ನಮಗಂತೂ ತಿಳಿಯಲಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ನಾನು ನಿಮಗೆ ತಿಳಿಯಬೇಕೆಂದು ಮಾತನಾಡುತ್ತಿಲ್ಲ. ಬೇಕಿದ್ದರೆ ಕೇಳಿ ಇಲ್ಲದಿದ್ದರೆ ಬಿಡಿ. ಬೇರೆ ವಿಚಾರಗಳಿಗೆ ಗಂಟೆಗಟ್ಟಲೆ ವಿಚಾರ ಮಾಡುತ್ತೀರಿ. ಷೆಡ್ಯೂಲ್ಡ್ ಕ್ಯಾಸ್ಟ್ ವಿಷಯಗಳು ಅಂದರೆ ನಿಮಗೆ ಅಲರ್ಜಿ ಆಗುತ್ತದೆಯೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಪೂರ್ತಿ ತಿಳಿಸಿ ಮಾತನಾಡಿ ಬೇಡ ಎಂದು ಹೇಳುವುದಿಲ್ಲ. ಟೈಮ್ ತೆಗೆದುಕೊಂಡು ಮಾತನಾಡಿ ಇದು ಭಾಷಣವೋ, ಪ್ರಶ್ನೆಯೋ? ನೀವು ಮಾತನಾಡಬೇಡಿ ಎಂದು ನಾನು ಹೇಳಲಿಲ್ಲ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ನಿಮ್ಮ ನಾಯಕರು ಹೇಳಿದ್ದಾರೆ.

ಉಪಾಧ್ಯಕ್ಷರು:- ಈಗ ಮೋಟಮ್ಮನವರು ಮಾತನಾಡುತ್ತಾರೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಇವತ್ತು ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಅಧಿಕಾರಿಗಳು ಇವರುಗಳನ್ನು ಟ್ರಾನ್ಸ್‌ಫರ್ ಮಾಡುವುದರಲ್ಲಿ ಮತ್ತೆ ಅವರಿಗೆ ಪವರ್ಸ್ ಡೆಲಿಗೇಟ್ ಮಾಡುವುದರಲ್ಲಿ ಬಹಳ ಮಿಸ್‌ಯೂಜ್ ಆಗುತ್ತಿದೆ. ಈ ಹಿಂದುಳಿದ ವರ್ಗದವರಿಗೂ ಸಹ ಬಹಳ ಮಿಸ್‌ಯೂಜ್ ಆಗುತ್ತಿದೆ. ಪರಿಶಿಷ್ಟ ಜಾತಿಯವರು ಭಾರತೀಯ ವೈದ್ಯಕೀಯ ಪದ್ಧತಿಯಲ್ಲಿ, ಹೋಮಿಯೋಪತಿಯಲ್ಲಿ....

ಉಪಾಧ್ಯಕ್ಷರು:- ಈಗ ಮೋಟಮ್ಮನವರು ಮಾತನಾಡುತ್ತಾರೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಅಲ್ಲಿ ಒಬ್ಬ ಪ್ರಿನ್ಸಿಪಾಲ್ ಇದ್ದರು. ಆತ ಷೆಡ್ಯೂಲ್ ಕ್ಯಾಸ್ಟ್ ಮ್ಯಾನ್.....

ಉಪಾಧ್ಯಕ್ಷರು:- ಡಿಟೇಲ್ಸ್ ಎಲ್ಲಾ ಬೇಡ.

ಶ್ರೀಮತಿ ಮೋಟಮ್ಮ:- ಅವರು ನ್ಯೂನತೆಗಳ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ನಾವು ಕಳುಹಿಸಿರುವ ಗಮನ ಸೆಳೆಯುವ ಸೂಚನೆಯೇ ನ್ಯೂನತೆ. ಅದನ್ನೇ ನಾನು ಹೇಳುತ್ತಿರುವುದು...

ಉಪಾಧ್ಯಕ್ಷರು:- ಅದು ಸರಿ, ಎಲ್ಲಾ ಡಿಟೇಲ್ಸ್‌ಗೆ ಹೋಗಬೇಡಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಅಲ್ಲಿ ಆತ ಒಳ್ಳೆಯ ಪ್ರಿನ್ಸಿಪಾಲ್ ಎಂದು ಕಾಣುತ್ತದೆ, ಆತ ಇನ್‌ಚಾರ್ಜ್ ಪ್ರಿನ್ಸಿಪಾಲ್. ಅಲ್ಲಿ ಬೇರೆ ಒಬ್ಬ ಪಾರ್ಟ ಟೈಮ್ ಲೆಕ್ಚರರ್ ಪ್ರಿನ್ಸಿಪಾಲ್ ಕೊಡುವುದಕ್ಕಾಗಿ, ಈತನ ಮೇಲೆ ನಾಲ್ಕು ಜನ ವಿದ್ಯಾರ್ಥಿಗಳ ಕೈಯಲ್ಲಿ ಈತ ಎಗ್ಜಾಮಿನೇಶನ್‌ಗೆ ಲಂಚ ಕೇಳಿದ ಅಂತ ಹೇಳಿ....

ಉಪಾಧ್ಯಕ್ಷರು:- ಕಾಲಿಂಗ್ ಅಟೆನ್‌ಷನ್‌ಗೆ ನೀವು ಇಷ್ಟು ಹೊತ್ತು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ದಯವಿಟ್ಟು ತಾವು ನೇರವಾಗಿ ಕೇಳಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ನಾವು ಪ್ರೊಟೆಸ್ಟ್ ಮಾಡಿ ಹೋಗಬೇಕಾಗುತ್ತದೆ.

ಉಪಾಧ್ಯಕ್ಷರು:- ಅಲ್ಲ ಅಲ್ಲ ನೀವು ಗಮನ ಸೆಳೆಯುವ ಸೂಚನೆಗೆ ಇಷ್ಟು ಹೊತ್ತು ತೆಗೆದುಕೊಂಡರೆ ಹೇಗೆ ಇನ್ನು ಮೋಟಮ್ಮನವರು ಮಾತನಾಡಬೇಕಾಗಿದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಹಾಗಾದರೆ ನೀವು ಸ್ವಲ್ಪ ತಾಳಿ ಅವರು ಎಲ್ಲಾ ಕೇಳುತ್ತಿದ್ದಾರೆ.

ಉಪಾಧ್ಯಕ್ಷರು:- ತಾವು ಏನು ಕಳುಹಿಸಿದ್ದೀರಿ ಅದಕ್ಕೆ ಎಷ್ಟು ಸಮಯ ಕೊಡಬೇಕು ಎಂದು ಒಂದು ರೂಲ್ಸ್ ಇದೆ. ಅದರ ಪ್ರಕಾರ ನಾನು ಸಭೆ ನಡೆಸಬೇಕಾಗುತ್ತದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಈಗ ನಾವು ಏನನ್ನೂ ಮಾತನಾಡುವುದು ಬೇಡ ಎಂದು ಹೇಳುತ್ತೀರಾ?

ಉಪಾಧ್ಯಕ್ಷರು:- ತಾವು ಬೇರೆ ರೂಪದಲ್ಲಿ ಕಳುಹಿಸಿ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಸುಳ್ಳು ಆಪಾದನೆ ಮಾಡಿ ಆತನನ್ನು ಸಸ್ಪೆಂಡ್ ಮಾಡಿದರು. ನಾವು ಕಮಿಟಿ ಮೀಟಿಂಗ್‌ನಲ್ಲಿ ವಿಚಾರ ಮಾಡಿದಾಗ ಏನು ಆಪಾದನೆ ಅಂದ್ರೆ ಆತ ಪರೀಕ್ಷೆ

ಪಾಸ್ ಮಾಡುವುದಕ್ಕೆ ಲಂಚ ತೆಗೆದುಕೊಳ್ಳುತ್ತಾನೆ, ದುಡ್ಡು ಕೊಟ್ಟರೆ ಪಾಸ್ ಮಾಡುತ್ತಾರೆ, ಇಲ್ಲದಿದ್ದರೆ ಫೇಲ್ ಮಾಡುತ್ತಾರೆ ಎಂದು ಹೇಳಿ ಅವರು ಅದರಲ್ಲಿ ಬರೆದಿದ್ದಾರೆ. ಅದನ್ನು ನಾವು ಈ ಕಾರಣದಿಂದ ಬರೆಯುವುದಾದರೆ ನಾವು ಇಲ್ಲಿ ಯಾರಾದರೂ ನಾಲ್ಕು ಜನ ಎಂ.ಎಲ್.ಎ.ಗಳು ಬರೆದುಕೊಡುತ್ತೇವೆ ನೀವು ಸಸ್ಪಂಡ್ ಮಾಡುತ್ತೀರಾ?

ಉಪಾಧ್ಯಕ್ಷರು:- ಈಗ ಶ್ರೀಮತಿ ಮೋಟಮ್ಮನವರು....

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಇದನ್ನು 15 ದಿವಸದಲ್ಲಿ ನಾವು ರೆಕ್ಟಿಫೈ ಮಾಡುತ್ತೇವೆಂದು ಹೇಳಿದರು. ಆದರೆ 15 ದಿವಸ ಅಲ್ಲ 4 ತಿಂಗಳು ಆದರೂ ಮಾಡಲಿಲ್ಲ. ಮಂತ್ರಿಗಳು ಹೋದ ಮೇಲೆ ಆ ನಂತರ ಮಾಡಿದರು. ಆ ಮಂತ್ರಿಗಳು ಅದನ್ನು 4 ತಿಂಗಳು ಇಟ್ಟುಕೊಂಡರು. ಇದು ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ನಡೆಯುತ್ತಿರತಕ್ಕಂಥ ಟ್ರೀಟ್‌ಮೆಂಟ್. ಇನ್ನು ಬ್ಯಾಕ್‌ವರ್ಡ್ ಕ್ಯಾಸ್ಟ್‌ನವರು ಸಿಟಿ ಕಾರ್ಪೊರೇಷನ್‌ನಲ್ಲಿ ಒಬ್ಬ ಡಾಕ್ಟರ್ ಪ್ರಮೋಶನ್‌ಗೆ ಅನೇಕ ವರ್ಷಗಳಿಂದ ಕಾಯುತ್ತಿದ್ದಾನೆ. ಅವರನ್ನು ಮಾಡಲಿಲ್ಲ ಇನ್ನೊಬ್ಬ ಅಧಿಕಾರ ಅವರು ಅಸಿಸ್ಟೆಂಟ್ ಕಮೀಷನರ್ ಗ್ರೇಡ್‌ನವರು ಅವರಿಗೆ ದೇವರಾಜ ಅರಸುರವರು ಇದ್ದಾಗ ಯಾರೋ ಡಿಮೋಶನ್ ಮಾಡಿದ್ದರು. ಮತ್ತೆ ಅವರು ಅದನ್ನು ರೆಕ್ಟಿಫೈ ಮಾಡಿದರು.

ಉಪಾಧ್ಯಕ್ಷರು:- ತಾವು ಏನು ಹೇಳಬೇಕೋ ಹೇಳಿ. ದಯವಿಟ್ಟು. ಇನ್ನು 4 ಜನ ಮಾತನಾಡುವವರು ಇದ್ದಾರೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಆಮೇಲೆ ಕಮರ್ಷಿಯಲ್ ಟ್ಯಾಕ್ ಆಫೀಸ್‌ನಲ್ಲಿ ಬ್ಯಾಕ್‌ವರ್ಡ್ ಕ್ಯಾಸ್ಟ್‌ನವರಿಗೆ ಏನು ತೊಂದರೆ ಇದೆ ಅಂತ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ವಿರೋಧಪಕ್ಷದ ನಾಯಕರು ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಬಗ್ಗೆ ಹೇಳಿದರು. ಈ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಪರವಾಗಿ ಹುಬ್ಬಳ್ಳಿಯಲ್ಲಿ ಅನೇಕ ಮೆರವಣಿಗೆಗಳು ನಡೆದಿವೆ. ಅಧಿಕಾರಿಗಳಿಗೆ ಹಣ ವಸೂಲಿ ಮಾಡಿ ಎಂದು ಸರ್ಕಾರ ಹೇಳಿ, ಅವರು ಹಣ ವಸೂಲಿ ಮಾಡುವುದು ತಪ್ಪು ಎಂದು ಅನೇಕ ಸಂಘಸಂಸ್ಥೆಗಳು ಹೇಳಿವೆ. ಹೋಗಲಿ ಶ್ರೀಮಾನ್ ದೇಶಪಾಂಡೆಯವರು ಹೇಳಿದರಲ್ಲಾ, ಅವರು ತೆರಿಗೆಗಳ್ಳರಲ್ಲ ಅಂತ ಏನಾದರೂ ಹೇಳುವುದಾದರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ತೆರಿಗೆಗಳ್ಳರಿದ್ದಾರೆ ಅವರಿಂದ ವಸೂಲಿ ಮಾಡಿದ್ದಾರೆ. ಆದ್ದರಿಂದ ಇವನು ಬ್ಯಾಕ್‌ವರ್ಡ್ ಕ್ಯಾಸ್ಟ್‌ನ ಒಬ್ಬ ಅಧಿಕಾರಿ ಸಿಕ್ಕಿದ ಎಂದು ಹೇಳಿ ಆತನ ಮೇಲೆ ಸಾಕಷ್ಟು ವಿರೋಧ ವ್ಯಕ್ತಪಡಿಸುವುದು ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ.

ಉಪಾಧ್ಯಕ್ಷರು:- ಶ್ರೀಮತಿ ಮೋಟಮ್ಮನವರು ಮಾತನಾಡಿ....

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಸದಸ್ಯರು ಏನು ಹೇಳುತ್ತಾರೆಂದು ನನಗೆ ಗೊತ್ತಿಲ್ಲ. ಇಲ್ಲಿ ನಾನು ಮಾತನಾಡುವಾಗ ಹಿಂದುಳಿದಿರುವವರು, ಮುಂದುವರೆದಿರುವವರು, ಪರಿಶಿಷ್ಟ ಜಾತಿ ಎಂದು ಮಾತನಾಡುವುದಕ್ಕೆ ಬರುವುದಿಲ್ಲ. ನನಗೆ ಕೆಲವು ಸಂಸ್ಥೆಗಳಿಂದ ದೂರು ಬಂದಾಗ ಅದನ್ನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಒಪ್ಪಿಕೊಂಡಿದ್ದಾರೆ. ಅವರೂ ಅದರ ಬಗ್ಗೆ ವಿಚಾರಣೆ ಮಾಡಬೇಕೆಂದು ಹೇಳಿದ್ದಾರೆ. ಹೊನ್ನಾಳಿಯಲ್ಲಿ ಮೇಲ್ವರ್ಗಕ್ಕೆ ಸೇರಿದ ಒಬ್ಬ ಅಧಿಕಾರಿ ಇದ್ದಾನೆ? ಅವನು ಲಫಂಗ ಇದ್ದರೆ ಬಿಡುವುದಕ್ಕಾಗುತ್ತದೆಯೆ, ಹಿಂದುಳಿದ ಜನಾಂಗದವನೊಬ್ಬ ಲಫಂಗ ಇದ್ದರೆ ಅವನಿಗೆ ಬಿಡುವುದಕ್ಕಾಗುತ್ತೇನೂ ಹಾಗೆಲ್ಲ ಮಾತನಾಡಲಿಕ್ಕಾಗುವುದಿಲ್ಲ. ಇಲ್ಲಿ ಹಿಂದುಳಿದ ಜನಾಂಗ, ಪರಿಶಿಷ್ಟ ಜನಾಂಗ ಎಂದು ಆರ್ಗ್ಯುಮೆಂಟ್ ಮಾಡುವುದಕ್ಕಾಗುವುದಿಲ್ಲ. ಯಾರು ಯೋಗ್ಯ ಅವನು ಯೋಗ್ಯ. ಯಾರು ಕೆಟ್ಟವನೋ ಅವನು ಕೆಟ್ಟವನು. ಹಾಗಾಗಿ ತಮಗೆ ಆ ಭಾವನೆಯಿಂದ ಅವರು ಹಿಂದುಳಿದವರು ಅವರ ಮೇಲೆ ಅಪಾದನೆ ಮಾಡಿದ್ದಾರೆಂದು ತಪ್ಪು ಕಲ್ಪನೆ ಮಾಡಬಾರದು. ನನಗೆ ದೂರು ಬಂದಿದೆ, ನಾನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಅವನೊಬ್ಬನೇ ಅಲ್ಲ. ಅಲ್ಲಿಗೆ ಹೋಲ್ ಟೀಮ್ ಹೋಗಿದೆ. ಅವರೇನೆಲ್ಲಾ ಮನೆ ನುಗ್ಗುವುದಕ್ಕೆ ಹೋಗಿರಲಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಒಂದು ಹೈಪವರ್ ಕಮಿಟಿ ಮಾಡಿ ಈ ಎಲ್ಲಾ ಇಲಾಖೆಗಳನ್ನು ಪರಿಶೀಲಿಸಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷಣಿಯವರು:- Nothing will go on record. ಎಲ್ಲದಕ್ಕೂ ಒಂದು ಲಿಮಿಟ್ ಇದೆ. ಶ್ರೀಮತಿ ಮೋಟಮ್ಮ ತಾವು ಬೇಗ ಮುಗಿಸಿ.

† ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಸನ್ಮಾನ್ಯ ಅಧ್ಯಕ್ಷಣಿಯವರೆ, ಮಾನ್ಯ ಮುಖ್ಯಮಂತ್ರಿಗಳ ಉತ್ತರ ನೋಡಿ ನಮಗೆ ಸ್ವಲ್ಪ ವ್ಯಸನವಾಗುತ್ತದೆ. ಇದು ಮಾನ್ಯ ಮುಖ್ಯಮಂತ್ರಿಗಳ ಹೃದಯಾಂತರಾಳದ ಉತ್ತರ ಖಂಡಿತ ಅಲ್ಲ. ಸರ್ಕಾರಿ ಅಧಿಕಾರಿಗಳು ಏನು ಕೊಟ್ಟಿದ್ದಾರೆ? ಇದು ನಿಜಕ್ಕೂ ನಮಗೆ ಸಂತೋಷ ತರುವಂಥ ವಿಷಯವಲ್ಲ. ಏಕೆಂದರೆ, ಇಲ್ಲಿ ಯಾವುದೋ ಒಂದು ಉದ್ಯೋಗ ಕೋಶ ಎಂದು ಮಾಡಿದ್ದಾರೆ. ಮೀಸಲಾತಿ ಆದೇಶಗಳನ್ನು ಅನುಷ್ಠಾನ ಮಾಡುವ ಬಗ್ಗೆ ತಪಾಸಣೆ ಮಾಡಲಿಕ್ಕೋಸ್ಕರ ಇಟ್ಟಿದ್ದೇವೆಂದು ಹೇಳುತ್ತಾರೆ. ಆದರೆ, ಈ ಉದ್ಯೋಗ ಕೋಶ ಎಷ್ಟು ಇಲಾಖೆಗಳಲ್ಲಿ, ತಪಾಸಣೆ ಮಾಡಿದೆ ಎನ್ನುವುದನ್ನು ಮೊದಲನೆಯದಾಗಿ ವಿಚಾರ ಮಾಡಬೇಕು. ಎರಡನೆಯದಾಗಿ ಬಡ್ತಿ ಕೊಡುವಾಗ ನ್ಯೂನತೆಗಳು, ಕೊರತೆಗಳು ಯಾವುದೇ ಇಲಾಖೆಗಳಲ್ಲಿ ಕಂಡುಬಂದರೆ ಅದಕ್ಕೆ ಸೂಕ್ತ ಆದೇಶ ನೀಡಿದ್ದೇವೆಂದು ಹೇಳಿದ್ದಾರೆ. ಯಾವ ಯಾವ ಇಲಾಖೆಗಳಲ್ಲಿ ಈ ತರಹ ಆದೇಶ ನೀಡಿದ್ದಾರೆಂದು ಬಹಳ ಮುಖ್ಯವಾಗಿ ಹೇಳಬೇಕಾಗುತ್ತದೆ. ಇನ್ನೊಂದು ಪ್ರಾಮುಖ್ಯವಾದ ಪ್ರಶ್ನೆಯೆಂದರೆ, ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಸಹ ಈ ಜನಾಂಗಕ್ಕೆ ಏನು 18 ಪರ್‌ಸೆಂಟ್ ಮೀಸಲಾತಿ ಕೊಡಬೇಕು? ನೇರ ನೇಮಕಾತಿಯಲ್ಲಿ ಮತ್ತು ಬಡ್ತಿಯಲ್ಲಿ ಮೀಸಲಾತಿ ಕೊಡಬೇಕೆಂದು ಇಲ್ಲಿ ಹೇಳಿದೆ? ಆದರೆ ಅದು ಅನುಷ್ಠಾನದಲ್ಲಿ ಆಗಿಲ್ಲ. ಅದನ್ನು ಕಂಡು 84ರಲ್ಲಿ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಒಂದು ಡೈರಕ್ಷನ್ ಕೊಟ್ಟಿದೆ. ಈ ಒಂದು ಏನು ಮೀಸಲಾತಿ ಇದೆ? ಅದು ಎಲ್ಲಿ ಸಾಕಷ್ಟು ಫಿಲಪ್ ಆಗಿಲ್ಲ? ಅಂಥಾ ಕಡೆ ನೀವು ಬ್ಯಾಕ್‌ಲಾಗ್ಸ್ ಎಂದು ಇಟ್ಟುಕೊಂಡು ಅಲ್ಲಿ ಪ್ರಮೋಷನ್ ಕೊಟ್ಟು ವೇಕೆನ್ಸಿಯನ್ನು ಫಿಲಪ್ ಮಾಡಿ ಎಂದು. ಈ ಬ್ಯಾಕ್‌ಲಾಗ್ ವೇಕೆನ್ಸಿಯನ್ನು ಫಿಲಪ್ ಮಾಡುವುದರಲ್ಲಿ ಯಾವ ಇಲಾಖೆಗಳೂ ಅದನ್ನು ಸರಿಯಾಗಿ ಮಾಡುತ್ತಿಲ್ಲ. ಏಕೆಂದರೆ, ನೂರಾರು ಅರ್ಜಿಗಳು ನಮ್ಮ ಮುಂದೆ ಬಂದಿವೆ. ಪ್ರತಿಯೊಂದು ಇಲಾಖೆಯವರು, ಈಗ ಹೇಳಿದ ಹಾಗೆ ಕೆ.ಎಂ.ಎಫ್‌ನಲ್ಲಿ.....

ಉಪಾಧ್ಯಕ್ಷಿಣಿಯವರು:- ಅವರು ಹೇಳಿದ್ದನ್ನೇ ರಿಪೀಟ್ ಮಾಡಬೇಡಿ.

ಶ್ರೀಮತಿ ಮೋಟಮ್ಮ:- ಕರ್ನಾಟಕ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ನಾನು ಪ್ರಶ್ನೆ ಹಾಕಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದರು. ಹೇಳುತ್ತಾ, ಡೆಲಿಬರೇಟ್ ಆಗಿ ಇಲ್ಲಿ ತಪ್ಪು ಮಾಡಿದ್ದಾರೆಂದು ಹೇಳಿದ್ದೆ. ಏಕೆಂದರೆ, ಅಡ್ವರ್ಟೈಸ್‌ಮೆಂಟ್‌ನಲ್ಲಿ ಹರಿಜನರಿಗೆಂದು ಮಾಡಿ ಅದನ್ನು ಕ್ಯಾಂಡಿಡೇಟ್ ಸಿಕ್ಕಲಿಲ್ಲವೆಂದು ಹೇಳಿ ಜನರಲ್‌ರವರಿಗೆ ಫಿಲಪ್ ಮಾಡಿದ್ದಾರೆ. ಆ ಪೋಸ್ಟ್‌ನ್ನು ರಿಸರ್ವ್ ಮಾಡಿದ ಮೇಲೆ ಅದನ್ನು ಕ್ಯಾರಿ ಓವರ್ ಮಾಡಬೇಕು. ಅದನ್ನು ಬೇರೆಯವರಿಗೆ ಕೊಡುವುದರಲ್ಲಿ ಅರ್ಥ ಏನಿದೆ? ಇಲ್ಲಿ ಹಗಲು ದರೋಡೆ ಮಾಡಿದ್ದಾರೆ, ಹರಿಜನರಿಗೆ ಸಂವಿಧಾನದ ಹಕ್ಕನ್ನು ಮೊಟಕು ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ಸಭೆಯಲ್ಲಿ ಹೇಳಿದೆ. ಆವಾಗ ಮಾನ್ಯ ಮುಖ್ಯಮಂತ್ರಿಯವರು ದೊಡ್ಡ ಮನಸ್ಸು ಮಾಡಿ, ಯಾವುದೇ ಇಲಾಖೆಯಲ್ಲಿ ಇಂಥ ತಪ್ಪಾಗಿದ್ದರೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಏಕೆಂದರೆ, ಇಲ್ಲಿ ನಮ್ಮ ಗಮನಕ್ಕೆ ಏನು ಬಂದಿದೆ ಅದನ್ನೆಲ್ಲಾ ಸರ್ಕಾರದ ಗಮನಕ್ಕೆ ಬರೆದಿದ್ದೇವೆ. ಆದರೆ ಯಾವುದೇ ಸೆಕ್ರೆಟರಿಯವರು ಇದುವರೆಗೆ ಒಂದು ರಿಪ್ಲೈಯನ್ನೂ ಬರೆದಿಲ್ಲ. ಪ್ರಮೋಷನ್ ಕೊಡಬೇಕಾದರೆ ಯಾರು ತಪ್ಪು ಮಾಡಿದ್ದಾರೆ? ಹೇಗೆ ತಪ್ಪು ಮಾಡಿದ್ದಾರೆ? ಅವರ ಬಗ್ಗೆ ಏಕೆ

ಕ್ರಮ ತೆಗೆದುಕೊಳ್ಳಬಾರದು ಎನ್ನುವ ಉದ್ದೇಶದಿಂದ ಯಾವ ಅಧಿಕಾರಿಯೂ ಕೆಲಸ ಮಾಡಿಲ್ಲ. ಅದಕ್ಕೆ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದಿಷ್ಟೇ, ಈ ಒಂದು ತಪಾಸಣೆ ಇಲ್ಲಿಯವರೆಗೆ ಯಾವ ಯಾವ ಇಲಾಖೆಗಳ ಬಗ್ಗೆ ನಡೆದಿದೆ, ಯಾವ ಯಾವ ಇಲಾಖೆಗಳಲ್ಲಿ ಈ ಕೊರತೆ ಕಂಡು ಬಂದಿದೆ, ಅಂದರೆ ಪ್ರಮೋಷನ್ ಕೊಡುವುದರಲ್ಲಿ, ಬ್ಯಾಕ್‌ಲಾಗ್ ಫಿಲಪ್ ಮಾಡುವುದರಲ್ಲಿ ಯಾವ ಇಲಾಖೆಯವರು ಡೆಲಿಬರೇಟ್ ಆಗಿ ತಪ್ಪು ಮಾಡಿ ಹರಿಜನರಿಗೆ ಅನ್ಯಾಯ ಮಾಡುತ್ತಿದ್ದಾರೆ, ಅಂಥವರುಗಳ ಮೇಲೆ ಇನ್ನು ಮುಂದಾದರೂ ಕಾನೂನು ರೀತಿ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ಫೈನ್ ಹಾಕಬೇಕು ಮತ್ತೆ ಅವರಿಗೆ ಜೈಲಿಗೆ ಕಳುಹಿಸಬೇಕು. ಒಬ್ಬ ಅಥವಾ ಇಬ್ಬರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ ಇನ್ನು ಮುಂದೆ ಇಂಥಾ ಸಮಸ್ಯೆ ಬರುವುದಿಲ್ಲ. ತಾವು ಬಡವರ ಬಗ್ಗೆ ಬಹಳ ಕಳಕಳಿ ಇರುವಂಥ ಒಬ್ಬ ಮುಖ್ಯಮಂತ್ರಿಯಾಗಿದ್ದೀರಿ. ಈ ಜನಾಂಗಕ್ಕೆ ನೀವು ನ್ಯಾಯ ಒದಗಿಸಲಿಕ್ಕೆ ಸರ್ವ ಪ್ರಯತ್ನ ಮಾಡಬೇಕೆಂದು ಮತ್ತು ಇದರ ಬಗ್ಗೆ ಒಂದು ಆದೇಶ ಹೊರಡಿಸಿ ಎಲ್ಲಾ ಇಲಾಖೆಗಳಲ್ಲಿ ಈ ನಿಯಮವನ್ನು ಪಾಲನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಉಪಾಧ್ಯಕ್ಷಿಣಿಯವರು:- ಗಮನ ಸೆಳೆಯುವ ಸೂಚನೆಗೆ ಯಾರು ಸಿಗ್ನೇಟರಿಗಳು ಇದ್ದಾರೆ, ಅವರುಗಳು ಮಾತ್ರ ಮಾತನಾಡಬಹುದು. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕರೆದಿದ್ದೇನೆ. You cannot speak since you are not the signatory to the Call Attention Notice. Only signatories can speak. There will be no clarifications. ಅದನ್ನು ಬಿಟ್ಟು ಎಲ್ಲರೂ ಸುಮ್ಮನೆ ನಿಂತುಕೊಂಡು ಇದು ಬಹಳ ಗಂಭೀರವಾದಂಥ ವಿಚಾರ ಎಂದು ಮಾತನಾಡಿದರೆ ಆಗುತ್ತದೆಯೇ? ಕೇವಲ ಸಿಗ್ನೇಟರಿಗಳು ಮಾತ್ರ ಮಾತನಾಡಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಸದಸ್ಯರಾದಂಥ ಬಿ.ಹೆಚ್.ಲಕ್ಷ್ಮಣಯ್ಯನವರು, ಶ್ರೀಮತಿ ಮೋಟಮ್ಮನವರು, ಬಹಳ ಗಂಭೀರವಾದಂಥ ಮತ್ತು ಪ್ರಾಮುಖ್ಯವಾದಂಥ ವಿಚಾರವನ್ನು ಎತ್ತಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಇದರ ಬಗ್ಗೆ ನಾವು ಸಾಕಷ್ಟು ಲಕ್ಷವನ್ನು ವಹಿಸಬೇಕಾಗುತ್ತದೆ. ಎಲ್ಲರೂ ಒಂದು ಕಡೆ ಮೀಸಲಾತಿ ಎಂದು ಹೇಳುತ್ತಾರೆ, ಆದರೆ ಇನ್ನೊಂದು ಕಡೆ ಮೀಸಲಾತಿಯನ್ನು ಉಲ್ಲಂಘನೆ ಮಾಡತಕ್ಕಂಥ ಕೆಲಸವು ಸಾರಾಸಗಟಾಗಿ ನಡೆಯುತ್ತದೆ. ಇದು ಬಹಳ ಸಮಯದಿಂದ ನಡೆದುಕೊಂಡು ಬಂದಿದೆ. ಅಂತೆಯೇ ನಾವು ಇದಕ್ಕಾಗಿ ಯಾರನ್ನೂ ಸೂಕ್ತ ಜವಾಬ್ದಾರರನ್ನಾಗಿ ಮಾಡಿರುವುದಿಲ್ಲ. ಅದರಿಂದ ಏನಾಗುತ್ತದೆ ಅಂದರೆ, ತಪ್ಪು ಮಾಡಿದವರು ಎಲ್ಲರೂ ತಪ್ಪಿಸಿಕೊಳ್ಳುತ್ತಾರೆ. ಮಾನ್ಯ ಸದಸ್ಯರು ಹೇಳಿದ್ದುದು ಸರಿ. ಅಂಥ ಒಂದು ಕಾನೂನು ಇದರಲ್ಲಿ ಅನುಷ್ಠಾನಕ್ಕೆ ಬಂದಿದೆ. ಆದರೆ ಈ ಕಾನೂನು ಬರುವ ಮೊದಲೂ ಕೂಡ ಮೀಸಲಾತಿ ಇತ್ತು. ಅದು ಸಂವಿಧಾನದ ಪ್ರಕಾರವಾಗಿಯೇ ಇರತಕ್ಕಂಥಾದ್ದು. ಆದರೆ ಇದರ ಉಲ್ಲಂಘನೆಯಾಗಿದ್ದರೂ ಕೂಡ ಅಧಿಕಾರಿಗಳನ್ನು ಈ ಬಗ್ಗೆ ಅಮಾನತ್ತಿನಲ್ಲಿಟ್ಟಿದ್ದು, ಡಿಸ್‌ಮಿಸ್ ಮಾಡಿದ್ದು, ಅಥವಾ ತಪ್ಪಿತಸ್ಥರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಂಡಿದ್ದು, ಅಥವಾ ಅವರ ಬಡ್ತಿಯನ್ನು ತಡೆಹಿಡಿದದ್ದು, ಅಂಥ ಯಾವ ಪ್ರಸಂಗವೂ ನಡೆದಿಲ್ಲ. ಆ ಒಂದು ಕಳಕಳಿಯಿಂದ ಮಾನ್ಯ ಸದಸ್ಯರು ಮಾತನಾಡುತ್ತಾ ಇದ್ದಾರೆ. ಇದರಿಂದಾಗಿ ಒಂದು ರೀತಿಯ ಅಲಕ್ಷತನವು ಸರಕಾರದಿಂದ ಆಗುತ್ತಿದೆ ಎಂಬುದಕ್ಕಾಗಿ ಅವರು ಪ್ರಸ್ತಾಪ ಮಾಡಿದ್ದಾರೆ. ಖಂಡಿತವಾಗಿಯೂ ಇಂಥ ಅಲಕ್ಷತನವನ್ನು ಹಿಡಿದು ನಿಲ್ಲಿಸಬೇಕು. ಈ ಕಾನೂನು ಏನಿದೆ ಇದನ್ನು ಪೂರ್ಣವಾಗಿ ಅನುಷ್ಠಾನಗೊಳಿಸಬೇಕು. ತಾವು ಹೇಳಿದ ಪ್ರಕಾರ ಉತ್ತರವು ಒಂದು ರೀತಿಯಲ್ಲಿ ಜನರಲ್ ಆಗಿಯೇ ಇದೆ. ಈಗ ಅವರು ಹೇಳಿದ ಅಂಶಗಳನ್ನು ನಂಬಬೇಕೋ ಬೇಡವೋ ಎಂದು ಯೋಚಿಸಬೇಕಾಗುತ್ತದೆ. ಪ್ರಾರಂಭದಲ್ಲಿ ಕೆಲವು ನ್ಯೂನತೆಗಳು ಕೂಡ ಕಂಡು ಬಂದಿದೆ, ಆದರೆ ಉಲ್ಲಂಘನೆಯಾಗಿಲ್ಲ ಎಂಬ ವರದಿಯು ಇದೆ. ಅದನ್ನು ನಂಬಿ ನಾನು ಇಲ್ಲಿ ಉತ್ತರ ಕೊಟ್ಟರೆ ನಾಳೆ ನನ್ನ ಮೇಲೆ ಪ್ರಿವಿಲೇಜ್ ಮೋಷನ್ ತಂದುಬಿಡುತ್ತಾರೆ. ಅದಕ್ಕಾಗಿ

ನಾನು ಹೇಳಿದ್ದು ಡಿ.ಪಿ.ಆರ್.ನಿಂದ ತಪಾಸಣೆ ಮಾಡಿಸಬೇಕು. ಅದು ಒಂದು ವಿಧ. ಇದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿಯಾದರೂ ಏಕೆ ಬೇಕು? ಏಕೆಂದರೆ ಸಂಬಂಧಪಟ್ಟ ಮುಖ್ಯ ಅಧಿಕಾರಿಗಳು ಯಾರಿದ್ದಾರೆ, ಅವರು ಅವರ ಇಲಾಖೆಯಲ್ಲಿ ಇದು ನಡೆದಿದ್ದರೆ, ಅದನ್ನು ತಪಾಸಣೆ ಮಾಡಬೇಕು. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡದಿದ್ದರೆ ಇಲಾಖೆಯ ಸೆಕ್ರೆಟರಿ ಮಾಡಬೇಕು. ಇದರಲ್ಲಿ ಇವರಿಬ್ಬರ ಜವಾಬ್ದಾರಿಯೂ ಇರುತ್ತದೆ. ನಾನು ಇವರಿಬ್ಬರನ್ನೂ ಜವಾಬ್ದಾರರನ್ನಾಗಿ ಮಾಡುತ್ತೇನೆ. ಒಂದು ವೇಳೆ ಇಲಾಖೆಯ ಮುಖ್ಯ ಅಧಿಕಾರಿಯು ಮಾಡದಿದ್ದರೆ ಅವನ ಕೈಕೆಳಗೆ ಏನು ಅವ್ಯವಹಾರ ನಡೆಯುತ್ತಾ ಇದೆ, ಅದಕ್ಕೆ ಅವನೇ ಜವಾಬ್ದಾರನಾಗಬೇಕಾಗುತ್ತದೆ. ಆ ಮುಖ್ಯ ಅಧಿಕಾರಿ ಏನಾದರೂ ತಪ್ಪು ಮಾಡಿದ್ದರೆ, ಅದಕ್ಕೆ ಕಾರ್ಯದರ್ಶಿಯವರು ಜವಾಬ್ದಾರಿಯಾಗಬೇಕಾಗುತ್ತದೆ. ನಾವು ಈಗ ಏನು ಮಾಡುತ್ತೇವೆ ಅಂದರೆ, ಇಂಥ ವಿಚಾರ ಬಂದಾಗ ವಿಚಾರಣೆಗಾಗಿ ಸಮಿತಿಗಳನ್ನು ಮಾಡುವುದು, ಕ್ಯಾಬಿನೆಟ್ ಸಬ್ ಕಮಿಟಿಗೆ ಬಿಡುವುದು, ಇತ್ಯಾದಿಗಳನ್ನು ಮಾಡಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಮಾಡಿದಂತೆ ಆಗಿದೆ. ಅಲ್ಲದೇ ವಿಷಯವನ್ನು ಎಸ್‌ಸಿ ಎಸ್‌ಟಿ ಕಮಿಟಿಗೆ ಒಪ್ಪಿಸುವುದು, ಇದೆಲ್ಲಾ ವಿಳಂಬ ನೀತಿಗೆ ಕಾರಣವಾಗುತ್ತದೆ. ಇದೆಲ್ಲಾ ತಪ್ಪಿಸಿಕೊಳ್ಳುವ ಒಂದು ಕ್ರಮ. ನಮ್ಮ ಕಡೆಯಲ್ಲಿ ಮೀನಿನ ಬಲೆಯನ್ನು ಮಾಡುತ್ತಾರೆ. ಬಲೆಯಿಂದ ಮೀನುಗಳು ತಪ್ಪಿಸಿಕೊಳ್ಳುವುದಕ್ಕೆ ಎಷ್ಟು ತೂತುಗಳು ಬೇಕೋ ಆಷ್ಟನ್ನು ಬಿಡುವುದು, ಅಂಥಾದ್ದರಲ್ಲಿ ಮೀನುಗಳು ಹೇಗೆ ಸಿಗಬೇಕು? ನಮ್ಮ ವ್ಯವಸ್ಥೆಯೆಲ್ಲಾ ಹೀಗೆಯೇ ಆಗಿದೆ. ತಪ್ಪಿತಸ್ಥರು ತಪ್ಪಿಸಿಕೊಳ್ಳಲು ಎಲ್ಲಾ ಅನುಕೂಲತೆಗಳನ್ನು ಮಾಡಿಕೊಂಡಿದ್ದಾರೆ. I am holding the Director responsible. I am holding the Secretary to Government responsible. ಹೀಗೆ ಅವರು ಇಬ್ಬರು ಮಾಡದಿದ್ದರೆ ನಮ್ಮ ಮಾನಿಟರಿಂಗ್ ಸೆಲ್ ಇದೆ, ಅದನ್ನು 100 ದಿವಸಗಳಿಗೆಂದು ಮಾಡಿದ್ದರೂ ಕೂಡ ಅದನ್ನು ಇನ್ನು ಮುಂದೆಯೂ ಅದು ಪರ್ಮನೆಂಟ್ ಮಾನಿಟರಿಂಗ್ ಸೆಲ್ ಆಗಿ ಇರುತ್ತದೆ. I am getting all these reports. ಇಷ್ಟು ಆಲ್ಲಿ ಮೀಸಲಾತಿ ಇರಬೇಕು. ಬಡ್ತಿಯಲ್ಲಾಗಲೀ, ಅಥವಾ ಅದು ನಿಗಮ ಇರಬಹುದು, ಅಥವಾ ಸರಕಾರದ ಬೇರೆ ಬೇರೆ ಇಲಾಖೆಗಳು ಇರಬಹುದು, ನಾವು ಅದನ್ನು ಎಲ್ಲಾ ಪಟ್ಟಿ ಮಾಡಿ ಇಡುತ್ತೇವೆ. We will maintain records in our Monitoring Cell. ಬೇಕಾದರೆ ಮಾನಿಟರಿಂಗ್ ಸೆಲ್‌ನಲ್ಲಿ ನೀವು 10 ದಿವಸಗಳ ನಂತರ ಬಂದು ನೋಡಿ ಎಲ್ಲಿ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟು ಪೋಸ್ಟ್‌ಗಳು ಇವೆ, ಎಷ್ಟು ಮೀಸಲಾತಿ ಇರಬೇಕು, ಎಷ್ಟು ತುಂಬಿದ್ದಾರೆ. ಎಷ್ಟು ತುಂಬಿಲ್ಲ, ವೀಕ್ ಟು ವೀಕ್ ಆಲ್ಲಿ ಎಲ್ಲಿಯಾದರೂ ಉಲ್ಲಂಘನೆಯಾಗಿದ್ದರೆ, ಹಿಂದೆ ಉಲ್ಲಂಘನೆಯಾಗಿದ್ದರೆ, ಅಥವಾ ಆಯಾ ವಾರದಲ್ಲಿ ಉಲ್ಲಂಘನೆಯಾಗಿದ್ದರೆ, ನಾವು ಅದನ್ನು ರೆಡ್‌ಅಲರ್ಟ್ ಮಾಡಿ ಅದನ್ನು ನೋಡುತ್ತೇವೆ. We will identify. I think, from to-day, if any officer takes these reservations or reservations concept lightly the Government will not hesitate to take action. Let there be first some casualty. Let this message go to all Departments. We will not tolerate any nonsense on this. This message is firm. I am closely monitoring it.

6.20 P.M

We will not hesitate to invoke the action. ತಾವು ಬೇರೆ ಬೇರೆ ವಿವರ ಕೊಟ್ಟಿದ್ದೀರಿ, ಅದು ಕೆಎಂಎಫ್‌ದು ಇರಬಹುದು ಅಥವಾ ಇನ್ನೊಂದು ಇರಬಹುದು, ಆ ವಿವರ ಇದರಲ್ಲಿ ಬರುತ್ತದೆ. ಆದ್ದರಿಂದ ಈ ಮೀಸಲಾತಿ ಬರೀ ಕಾಗದಪತ್ರದಲ್ಲಿರಬಾರದು, ಬರೀ ಸಂವಿಧಾನದಲ್ಲಿರಬಾರದು, ಇದು ವಾಸ್ತವಿಕವಾಗಿ ವ್ಯವಹಾರಕ್ಕೆ ಇಳಿಯಬೇಕು. ಎಲ್ಲಿ ಇದನ್ನು ವ್ಯವಹಾರಕ್ಕೆ ಇಳಿಸದೆ ಕಾನೂನಿನ ಬಗ್ಗೆ ಸಂವಿಧಾನದ ಬಗ್ಗೆ ಯಾರು ಸಲಿಗೆ ತೆಗೆದುಕೊಳ್ಳುತ್ತಾರೆ we will identify

them, punish them firmly, effectively without giving any escape routes. ಸಮಿತಿ ಮಾಡುವುದೂ ಕೂಡ ಒಂದು ಎಸ್ಕೇಪ್ ರೂಟ್ ಆಗಿದೆ. ಏಕೆಂದರೆ ಒಂದು ವರದಿ ಕೊಡ್ತೀರಿ, ಆದರ ಮೇಲೆ ಫಾಲೋ ಅಪ್ ಆಕ್ಷನ್ ಬರುತ್ತದೆ. ಅಲ್ಲಿ ಸಮಿತಿ ಬೇಕು, ಸಮಿತಿ ಬಗ್ಗೆ ಏನಾದರೂ ಹೇಳ್ತಾನೆ ಅಂತ ದಯಮಾಡಿ ತಿಳಿದುಕೊಳ್ಳಬೇಡಿ. ನಮ್ಮ ಜವಾಬ್ದಾರಿಯನ್ನು ನಿರ್ವಹಿಸದೆ, ತಪ್ಪಿಸಿಕೊಳ್ಳುವುದು, ಏನಾಗುತ್ತದೆ ಆ ಸೆಕ್ರೆಟರಿ ತಮಗೆ ಗೊತ್ತಿದೆ ಏಕಾಂತಯ್ಯನವರೇ ಆಮೇಲೆ ಅವನು ರಿಟೈರ್ ಆಗುತ್ತಾನೆ ನೀವು ಏನೂ ತೆಗೆದುಕೊಳ್ಳುವುದಕ್ಕೂ ಬರುವುದಿಲ್ಲ. ನಾನು ಫೈನಾನ್ಸ್ ಮಿನಿಸ್ಟರ್ ಆಗಿರುವಾಗ it so happened. ಒಬ್ಬ ಮನುಷ್ಯ ಮನೆಗೆ ಹೋಗಬೇಕಾಗಿತ್ತು, ಆಗ ನಾವು ಫೈಲ್ ಡಿಸ್‌ಪೋಸಲ್ ವೀಕ್ ಅಂತ ಮಾಡಿದ್ದೆವು. ಆ ಫೈಲ್‌ನ್ನು ಒಂದು ಕಪಾಟಿನಲ್ಲಿ ಹಾಕಿ ಇಟ್ಟಿದ್ದರು We removed that file and we suspended him. By this time he might have been dismissed. ಇದು ನಡೀತಾನೇ ಇದೆ, ಈಗಲೂ ನಡೆದಿರಬಹುದು ಆದರೆ all these irritants in the social life will have to be identified and plugged. I will entrust this to Monitoring Cell. If anybody wants to be a first casualty, he will be a first casualty. We will not hesitate to take action. ವಿವರವಾಗಿ ಕೆಎಂಎಫ್‌ದು ಎಲ್ಲ ಹೇಳಿದ್ದೀರಿ, ಆದು ಪ್ರತ್ಯೇಕವಾಗಿ ನೋಡೋಣ. ಆದರೆ ಇದು ಬಹಳ ಸಮಯ ಹೋಗುವುದಿಲ್ಲ ಒಂದು ತಿಂಗಳ ಒಳಗಡೆ ಇದನ್ನು ವ್ಯವಸ್ಥೆ ಮಾಡಲಿಕ್ಕೆ ನಾನು ಎಲ್ಲಾ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

**ನಿಯಮ 334ರ ಮೇರೆಗೆ**

ಉಪಾಧ್ಯಕ್ಷೆಣಿಯವರು:– ಈಗ ನಿಯಮ 334ರ ಕೆಳಗೆ ಬರುವ ವಿಷಯಗಳು.

**ವಿಷಯ:– ಬೆಂಗಳೂರು ಜಯನಗರ ರೈಲ್ವೆ ಕೌಂಟರಿನಲ್ಲಿ ಮೊದಲನೆ ತರಗತಿ ಇತರ ರೈಲುಗಳಿಗೆ ಮುಂಗಡ ಬುಕ್ಕಿಂಗ್ ವ್ಯವಸ್ಥೆ ಮಾಡಲು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸುವುದು.**

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):– ಬೆಂಗಳೂರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ದಕ್ಷಿಣ ರೈಲ್ವೆ ಮುಂಗಡ ರೈಲ್ವೆ ಬುಕಿಂಗ್ ಕೌಂಟರ್ ಇದ್ದು ಅಲ್ಲಿ ಕೇವಲ ಎರಡನೇ ಬೋಗಿಗಳಿಗೆ ಮಾತ್ರ ಬುಕಿಂಗ್ ವ್ಯವಸ್ಥೆ ಇರುತ್ತದೆ. ಇಲ್ಲಿ ಮೊದಲನೆಯ ದರ್ಜೆಯ ಬೋಗಿಗಳಿಗೆ ಬುಕಿಂಗ್ ವ್ಯವಸ್ಥೆ ಇರುವುದಿಲ್ಲ. ಸದರನ್ ರೈಲ್ವೆಯ ಎಲ್ಲಾ ರೈಲುಗಳಿಗೆ ಮುಂಗಡ ಬುಕಿಂಗ್ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಇಲ್ಲಿ ಮೊದಲನೆಯ ದರ್ಜೆ ಬೋಗಿಗಳಿಗೆ ಮುಂಗಡ ಬುಕಿಂಗ್ ವ್ಯವಸ್ಥೆ ಮಾಡಬೇಕು ಹಾಗೂ ಎಲ್ಲಾ ರೈಲುಗಳು ಮತ್ತು ಈಗಿರತಕ್ಕ ಎರಡನೇ ದರ್ಜೆಯ ಬೋಗಿಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ರೈಲ್ವೆ ಸಚಿವರ ಜೊತೆಗೆ ವ್ಯವಹರಿಸಬೇಕೆಂದು ಕೋರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):– ದಕ್ಷಿಣ ರೈಲ್ವೆಯ ಮುಂಗಡ ಬುಕ್ಕಿಂಗ್ ಕೌಂಟರ್ ಬೆಂಗಳೂರಿನ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ. ಸದರಿ ಕೌಂಟರ್‌ನಲ್ಲಿ ಮೊದಲನೇ ದರ್ಜೆ ಬೋಗಿಗಳಿಗೆ ಸ್ಥಳಕಾಯ್ದಿರಿಸಲಾಗುತ್ತಿಲ್ಲ. ಎಲ್ಲಾ ರೈಲುಗಳಿಗೂ ಸಹ ಮುಂಗಡ ಬುಕ್ಕಿಂಗ್ ಸೌಕರ್ಯ ಇಲ್ಲದೇ ಇರುವುದರಿಂದ, ಸಾರ್ವಜನಿಕರಿಗೆ ಈ ಸೌಕರ್ಯವನ್ನು ಒದಗಿಸಲು ಬುಕ್ಕಿಂಗ್ ಕೌಂಟರ್‌ನ್ನು ವಿಸ್ತರಿಸುವುದರ ಜೊತೆಗೆ ಎಲ್ಲಾ ರೈಲುಗಳಲ್ಲೂ ಸ್ಥಳ ಕಾಯ್ದಿರಿಸಲು ವ್ಯವಸ್ಥೆ ಹಾಗೂ ಈಗಿರತಕ್ಕ ಎರಡನೇ ದರ್ಜೆ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸಲು ಮಾನ್ಯ ಸದಸ್ಯರು ಕೋರಿರುವ ವಿಷಯ ಸಮಂಜಸವೆಂದು ಕಂಡುಬಂದಿರುವುದರಿಂದ ಈ ಬಗ್ಗೆ ಕೇಂದ್ರ ರೈಲ್ವೆ ಸಚಿವರ ಜೊತೆ ಸಮಾಲೋಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು.